6) ಒರಿಜನಲ್ ಛಾಯ್ಸ್ ವಿಸ್ಕಿ	1X 12X750 ಮಿ.ಲಿ
7) ಆರ್.ಕೆ.ಜಿನ್	6X48X 180 ಮಿ.ಲಿ
8) ಒರಿಜಿನಲ್ ಚಾಯ್ಸ್ ವಿಸ್ಕಿ	3X48X 180 ಮಿ.ಲಿ
9) ಛೇರಮನ್ ವಿಸ್ಕಿ	1X48X 180 ಮಿ.ಲಿ
10) ಮ್ಯಾಕ್‌ಡೊವಲ್ ವಿಸ್ಕಿ	4X 12X750 ಮಿ.ಲಿ
11) ಜಾಕಿ ವಿಸ್ಕಿ	3X48X 180 ಮಿ.ಲಿ
	3X48X 180 ಮಿ.ಲಿ
12) ವೈಟ್‌ಫೀಲ್ಡ್ ವಿಸ್ಕಿ	120 12X750 ಮಿ.ಲಿ
	5X48X750 ಮಿ.ಲಿ
13) ಮೋಡೇಸ್ XXX ರಂ	2X24X375 (180)
	1X48X 180 ಮಿ.ಲಿ
14) ರಾಯಲ್‌ಗೋಲ್ಡ್ ಕವ್ ವಿಸ್ಕಿ	1X48X 180 ಮಿ.ಲಿ
15) ಹೈವಾರ್ಡ್ಸ್ ವಿಸ್ಕಿ	2X48X 180 ಮಿ.ಲಿ
16) ಬ್ಯಾಗ್ ಪೈಪರ್ ವಿಸ್ಕಿ	2X48X 180 ಮಿ.ಲಿ
17) ರಾಜ ವಿಸ್ಕಿ	6X48X 180 ಮಿ.ಲಿ
18) ಕಿಂಗ್‌ಫಿಶರ್ ಬೀರ್	10X 12X650 ಮಿ.ಲಿ
19) ಹೈವಾರ್ಡ್ಸ್ ಲ್ಯಾಗರ್‌ಬೀರ್	12X 12X650 ಮಿ.ಲಿ
20) ನಾಕ್‌ಔಟ್ ಬೀರ್	2X 12X650 ಮಿ.ಲಿ

ಮೊಕದ್ದಮೆ ಪೋಲೀಸಿನವರಿಂದ ತನಿಖಾ ಹಂತದಲ್ಲಿದೆ.

ರಾಜ್ಯ ಸರ್ಕಾರಿ ನೌಕರರ ಕಾರ್ಯನಿರ್ವಹಣೆ.

156 (159)

ಶ್ರೀ ಚೌಡರೆಡ್ಡಿ (ಚಿಂತಾಮಣಿ): ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳು, ಶಾಸಕರು ತಮ್ಮ ಕಾರ್ಯವನ್ನು ನಿರ್ವಹಿಸಲು ನೆರವಾಗುವ ಬಗ್ಗೆ ಸರ್ಕಾರ ಯಾವುದಾದರೂ ಆದೇಶ ಸುತ್ತೋಲೆಗಳನ್ನು ಹೊರಡಿಸಿದೆಯೇ?

ಆ) ವಿಧಾನಪರಿಷತ್ತಿನ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಬರೆದಂತಹ ಪತ್ರಗಳಿಗೆ ಹಾಗೂ ಮೌಖಿಕ ಕೋರಿಕೆಗಳಿಗೆ ಸರ್ಕಾರಿ ನೌಕರರು: ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕೋಲಾರ ಜಿಲ್ಲೆಯ ಸರ್ಕಾರಿ ನೌಕರರು: ಅಧಿಕಾರಿಗಳು ಮತ್ತು ರಾಜ್ಯ ಮಟ್ಟದ ಅಧಿಕಾರಿಗಳು ಪತ್ರಗಳಿಗೆ ಉತ್ತರಿಸದೇ ಇರಲು ಕಾರಣ ಏನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ರಾಜ್ಯ ವಿಧಾನಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಉತ್ತರ ನೀಡುವ ಬಗ್ಗೆ ಸರ್ಕಾರವು ಸಾಕಷ್ಟು ಸೂಚನೆಗಳನ್ನು ನೀಡಿದೆ.

ಆ) ಇಲ್ಲ.

ಇ) ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಸಮಸ್ಯೆಗಳ ಕುರಿತು.

157 (20)

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರದೊಡನೆ ಸಮನ್ವಯ ನಡೆಸಲು ನವದೆಹಲಿಯಲ್ಲಿ ಕ್ಯಾಬಿನೆಟ್ ದರ್ಜೆ ಸಚಿವರನ್ನು ರಾಜ್ಯ ಪ್ರತಿನಿಧಿಯಾಗಿ ಇಡುವ